20	ಮುಂದುವರೆದ ಹಾಗೂ ಹೊಸ ಯೋಜನೆಗಳು (4701-ಯೋಜನೇತರ)	3955.00
ಅ)	ಕಾವೇರಿ ಕೊಳ್ಳದ ಯೋಜನೆಗಳು-4701 (ಯೋಜನೆ)	142.34
ಆ)	ಕಾವೇರಿ ಕೊಳ್ಳದ ಯೋಜನೆಗಳ ನಿರ್ವಹಣೆಗಾಗಿ (2701-ಯೋಜನೇತರ)	2187.21
ಈ)	ಕಾವೇರಿ ಕೊಳ್ಳದ ಸಣ್ಣನೀರಾವರಿ ಕಾಮಗಾರಿಗಳ ಅನುದಾನ (2702-ಯೋಜನೇತರ)	381.62
ಉ)	ಕಾವೇರಿ ಜಲಾನಯನ ಯೋಜನೆಗಳ ಅಚ್ಚುಕಟ್ಟು ಪ್ರಾಧಿಕಾರಗಳ ಹಂಚಿಕೆ (2705-ಯೋಜನೆ)	640.00
ಊ)	ರಸ್ತೆ ಅಭಿವೃದ್ಧಿ / ನಿರ್ವಹಣೆಗಾಗಿ (3054-ಯೋಜನೇತರ)	698.80

ರಾಜ್ಯದಲ್ಲಿ "ಬಿ.ಪಿ.ಎಲ್." ಪಟ್ಟಿ ತಯಾರಿಕೆ ಕುರಿತು

121(430) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿ.ಪಿ.ಎಲ್. ಪಟ್ಟಿಯನ್ನು ಪರಿಷ್ಕರಿಸಿ, ಹೊಸದಾಗಿ ತಯಾರಿಸಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಇ) ಬಿ.ಪಿ.ಎಲ್. ಪಟ್ಟಿಯನ್ನು ಪರಿಷ್ಕರಿಸುವ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ರಾಮಲಿಂಗರೆಡ್ಡಿ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಬಿ.ಪಿ.ಎಲ್. ಕುಟುಂಬಗಳ ಮನೆ ಮನೆ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ.

ಇ) ಮುಕ್ತಾಯ ಹಂತದಲ್ಲಿದೆ.

ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ನೀಡಿಕೊಳ್ಳುವುದು

122(431) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿಕರು ಬೆಳೆದ ಯಾವ್ಯಾವ ಬೆಳೆಯನ್ನು ರೈತರಿಂದ ಬೆಂಬಲ ಬೆಲೆ ನೀಡಿಕೊಳ್ಳಲು ರಾಜ್ಯ ಸರ್ಕಾರ ಉದ್ದೇಶಿಸಿದೆ;